ರಾಜ್ಯದಲ್ಲಿರುವ ಲೋಕೋಪಯೋಗಿ ರಸ್ತೆಗಳು

1269 (1503) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ರಾಜ್ಯದಲ್ಲಿರುವ ಲೋಕೋಪಯೋಗಿ ರಸ್ತೆಗಳ ಉದ್ದಳತೆ ಎಷ್ಟು?

ಆ) ರಾಷ್ಟ್ರೀಯ ಹೆದ್ದಾರಿಗಳ ಉದ್ದಳತೆ ಎಷ್ಟು?

ಇ) ರಾಜ್ಯಾಂದ್ಯಂತ ರಸ್ತೆಗಳು ಕೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ; ಹಾಗಿದ್ದಲ್ಲಿ ರಸ್ತೆಗಳ ದುರಸ್ಥಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಈ) 1999-2000ನೇ ಸಾಲಿನಲ್ಲಿ ನಬಾರ್ಡ್‌ನಿಂದ ರಸ್ತೆಗಳ ಅಭಿವೃದ್ಧಿಗೆ ಒದಗಿಸಿರುವ ಹಣ ಎಷ್ಟು ; ಮತ್ತು ಇದುವರೆಗೆ ಖರ್ಚು ಮಾಡಲಾದ ಹಣ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)

ಶ್ರೀಧರಮ್ ಸಿಂಗ್ (ಲೋಕೋಪಯೋಗಿ ಸಚಿವರು)

ಅ) ಲೋಕೋಪಯೋಗಿ ರಸ್ತೆಗಳ ಉದ್ದ 38268 ಕಿ.ಮೀ

ಆ) ರಾಷ್ಟ್ರೀಯ ಹೆದ್ದಾರಿಗಳ ಉದ್ದ 3524 ಕಿ.ಮೀ.

ಇ) ರಾಜ್ಯದಲ್ಲಿ ರಸ್ತೆಗಳು ಹಲವೆಡೆ ಕೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಆಯವ್ಯಯದಲ್ಲಿ ಒದಗಿಸಿರುವ ಅನುದಾನವನ್ನು ರಸ್ತೆಗಳ ದುರಸ್ತಿಗೆ ಉಪಯೋಗಿಸಿದೆ. ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳನ್ನು ಅಭಿವೃದ್ಧಿ ಪಡಿಸಲು 75.00 ಕೋಟಿ ರೂ.ಗಳ ಯೋಜನೆಯನ್ನು ತಯಾರಿಸಿದೆ. ಪ್ರಕೃತಿ ವಿಕೋಪ ಪರಿಹಾರ ನಿಧಿ (ಸಿ.ಆರ್.ಎಫ್) ಯಲ್ಲಿ ಹಾಳಾಗಿರುವ ರಸ್ತೆಗಳನ್ನು ದುರಸ್ತಿಪಡಿಸಲಾಗುತ್ತಿದೆ.

ಆಯ್ದ ರಾಜ್ಯ ಹೆದ್ದಾರಿಗಳನ್ನು ವಿಶ್ವಬ್ಯಾಂಕ್ ಸಹಾಯದಲ್ಲಿ ಅಭಿವೃದ್ಧಿಪಡಿಸಲು ಯೋಜನೆಯನ್ನು ರೂಪಿಸಲಾಗಿದೆ. ಇದಲ್ಲದೆ ಹುಡ್ಕೋ ಸಹಾಯದಲ್ಲಿ ಹಲವು ರಸ್ತೆಗಳನ್ನು ಮತ್ತು ಸೇತುವೆಗಳನ್ನು ದುರಸ್ತಿ ನಿರ್ಮಾಣ ಮಾಡುವ ಯೋಜನೆಯನ್ನು ಪ್ರಾರಂಭಿಸಲಾಗಿದೆ.

ಈ) ಈವರೆಗೆ ನಬಾರ್ಡ್‌ನಿಂದ 1999-200ನೇ ಸಾಲಿನಲ್ಲಿ 106.37 ಕೋಟಿ ರೂ.ಗಳ ಮೊತ್ತದ 227 ರಸ್ತೆ ಮತ್ತು ಸೇತುವೆ ಕಾಮಗಾರಿಗಳು ನಬಾರ್ಡ್‌ನಿಂದ ಮಂಜೂರಾಗಿದೆ. 1996-97ನೇ ಸಾಲಿನಿಂದ ಇಲ್ಲಿಯವರೆಗೆ ನಬಾರ್ಡ್ ಯೋಜನೆಯಡಿ ಕೈಗೊಂಡಿರುವ 1144 ರಸ್ತೆ ಮತ್ತು ಸೇತುವೆ ಕಾಮಗಾರಿಗಳಿಗೆ ಈ ಸಾಲಿನಲ್ಲಿ ಮಾಡಲಾದ ವೆಚ್ಚ 97.93 ಕೋಟಿ ರೂ.ಗಳು (ಜಿಲ್ಲಾವಾರು ವಿವರವನ್ನು ಅನುಬಂಧದಲ್ಲಿ ನೀಡಿದೆ)

Annexure to LAQ NO 1503

Sl No	DISTRICT	District Wise sanction under year 1999-2000 so far	Expenditure incurred during the year 99-2000
1	Bangalore (Rural)	237.63	486.12
2	Kolar	1,082.65	1,137.28
3	Tumkur	256.32	473.42
4	Mysore	661.55	188.68
5	Chamaraja Nagara	144.23	195.24
6	Mandya	1,211.25	325.29
7	Shimoga	387.60	431.81
8	Chitradurga	643.68	468.79
9	Davanagere	412.29	450.93
10	Hassan	150.49	464.00
11	Chickmagalur	131.26	369.99
12	Dakshina Kannada	180.29	240.57
13	Udupi	175.38	286.10
14	Kodagu	66.81	247.48

15	Belgaum	763.58	685.40
16	Bijapur	437.51	483.62
17	Bagalkote	583.08	236.55
18	Dharwad	152.15	185.10
19	Gadag	688.76	308.33
20	Haveri	341.57	527.34
21	Uttara Kannada	352.37	269.06
22	Gulbarga	940.73	343.27
23	Bidar	244.15	172.23
24	Raichur	-	253.97
25	Koppal	227.36	357.31
26	Bellary	164.98	119.41
	Grand Total	**10,637.67**	**9,707.29**

ಬೈಲಹೊಂಗಲ ಕ್ಷೇತ್ರದ ಪಶು ಚಿಕಿತ್ಸಾ ಕೇಂದ್ರಗಳು

1270 (1695) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) : ಮಾನ್ಯ ಪಶುಸಂಗೋಪನಾ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) 1999-2000ನೇ ಸಾಲಿನಲ್ಲಿ ಮಂಜೂರಾದ ಪಶು ಚಿಕಿತ್ಸಾಲಯ ಕೇಂದ್ರಗಳ ಸಂಖ್ಯೆ ಎಷ್ಟು?

ಆ) ಮೇಲ್ದರ್ಜೆಗೆ ಏರಿಸಲು ನಿರ್ಧರಿಸಲಾದ ಪಶು ಚಿಕಿತ್ಸಾ ಕೇಂದ್ರಗಳ ಸಂಖ್ಯೆ ಎಷ್ಟು?